# ಪ್ರಚಾರ ದಿನಚರಿ– 17 ಏಪ್ರಿಲ್ 2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

## ನ್ಯಾಯೋಚಿತ ಆದರೆ ದ್ವೇಷರಾಜಕಾರಣವಲ್ಲ

ಎನ್‌ಡಿಎ ಪ್ರಧಾನ ಮಂತ್ರಿ ಅಭ್ಯರ್ಥಿ ನರೇಂದ್ರ ಮೋದಿ ಅವರು ಎಎನ್‌ಐ ಸುದ್ದಿವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಮಹತ್ವದ ಹೇಳಿಕೆ ನೀಡಿದ್ದಾರೆ. ಮುಂದಿನ ಸರ್ಕಾರ ಸಕಾರಾತ್ಮಕ ಉದ್ದೇಶಗಳನ್ನು ಅವಲಂಬಿಸುತ್ತದೆ ಹೊರತು ದ್ವೇಷ ರಾಜಕಾರಣ ಮಾಡುವುದಿಲ್ಲ.

ಭಾರತ ಬದಲಾಗುತ್ತಿದೆ. ಜನರು ಸಹನೆ ಕಳೆದುಕೊಳ್ಳುತ್ತಿದ್ದಾರೆ. ಆಕಾಂಕ್ಷೆಗಳನ್ನು ಹೊಂದಿದ ವರ್ಗ ವಿಸ್ತರಿಸುತ್ತಿದೆ. ಉತ್ತಮ ಜೀವನಶೈಲಿ ಬಯಸುವ ಜನರು ಶ್ರೇಷ್ಠ ಆಡಳಿತ ವ್ಯವಸ್ಥೆಯನ್ನು ಬಯಸಿದ್ದಾರೆ. ಹೊಸ ಪೀಳಿಗೆಯು ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯ ರಕ್ಷಣೆ ಹಾಗೂ ನೈರ್ಮಲ್ಯ ಬಯಸಿದೆ. ಎರಡೂ ಪಕ್ಷಗಳ ವಾಗ್ವಾದದ ಬದಲು ಕಾರ್ಯಕ್ರಮಗಳ ಅನುಷ್ಠಾನ ಮಾಡಬಲ್ಲ ರಾಜಕಾರಣವನ್ನು ಅವರು ಬಯಸಿದ್ದಾರೆ.

ಈ ಸನ್ನಿವೇಶದಲ್ಲಿ, ಸಾಧನೆಗಳು ಹಾಗೂ ಪ್ರಗತಿಯನ್ನು ಸಾಧಿಸುವ ಸರ್ಕಾರವನ್ನು ಜನರು ಸ್ಮರಿಸುತ್ತಾರೆಯೇ ಹೊರತು ಪ್ರತಿಸ್ಪರ್ಧಿಯ ವಿರುದ್ಧ ಸಾರುವ ರಾಜಕೀಯ ಸಂಘರ್ಷದ ಯಶಸ್ಸು ಅವರಿಗೆ ಮುಖ್ಯವಲ್ಲ. ಕಾನೂನು ಪಾಲಿಸಬಾರದು ಎಂಬ ಅರ್ಥ ಇದಕ್ಕಿಲ್ಲ. ಜನರಿಂದ ಅಪರಾಧವಾಗಿದ್ದರೆ, ಸ್ವಾಯತ್ತ ತನಿಖಾ ಸಂಸ್ಥೆಯಿಂದ ಮುಕ್ತ ವಿಚಾರಣೆ ನಡೆಯಬೇಕು. ಸಂಸ್ಥೆಗಳ ಸ್ವಾಯತ್ತತೆ ಹಾಗೂ ವೃತ್ತಿಪರತೆಯನ್ನು ಕಾಪಾಡುವುದು ಅತಿ ಮುಖ್ಯ. ಪ್ರಾಮಾಣಿಕ, ರಾಜಕೀಯ ಹಸ್ತಕ್ಷೇಪ ಮುಕ್ತ ಸ್ವತಂತ್ರ ವ್ಯಕ್ತಿಗಳಿಗೆ ತನಿಖಾ ಸಂಸ್ಥೆಗಳ ಜವಾಬ್ದಾರಿ ನೀಡಬೇಕು. ಮುಂಬರುವ ಸರ್ಕಾರ ಇದನ್ನು ಜಾರಿಗೆ ತಂದಲ್ಲಿ, ಅದರ ಉದ್ದೇಶ ಸಫಲವಾಗುತ್ತದೆ.

## ಮತದಾರರು ಮೂರ್ಖರಲ್ಲ

ಇಂದು ದೇಶಾದ್ಯಂತ 121 ಲೋಕಸಭಾ ಮತಕ್ಷೇತ್ರಗಳಲ್ಲಿ ಚುನಾವಣೆ ನಡೆಯಲಿದೆ, ಭಾರತದ ಅರ್ಧಭಾಗ, 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಲಿದೆ. ಸಮೀಕ್ಷೆ ಏನು ಹೇಳುತ್ತವೆ? ತೃತೀಯ ರಂಗ ಅಥವಾ ಒಕ್ಕೂಟ ರಂಗ ಶೈಶವಾಸ್ಥೆಯಲ್ಲಿದೆ. ಕಾಂಗ್ರೆಸ್ ಬಹಳ ಹಿಂದೆ ಉಳಿದಿದೆ. ಸರ್ಕಾರ ರಚಿಸುವ ಅವಕಾಶ ಕೇವಲ ಎನ್‌ಡಿಎ ಸಮ್ಮಿಶ್ರ ಸರ್ಕಾರಕ್ಕಿದೆ. ಯುಪಿಎ ವಿರುದ್ಧ ಜನಾಕ್ರೋಶ ಕಂಡುಬರುವ ಜೊತೆಗೆ ನರೇಂದ್ರ ಮೋದಿ ಪರ ಅಲೆ ಎದ್ದಿದೆ. ಸ್ಥಿರ ಸರ್ಕಾರ ನೀಡಬಲ್ಲ ವ್ಯಕ್ತಿ ಯಾರು ಎಂಬ ಜಿಜ್ಞಾಸೆ ಸಾಮಾನ್ಯ ಭಾರತೀಯರಲ್ಲಿ ಮೂಡಿದೆ. ಇದಕ್ಕೆ ಲಭಿಸುವ ಉತ್ತರವು ಭಾಜಪ ಮತ್ತು ಎನ್‌ಡಿಎ ಪರವಾಗಿದೆ. ಜನರು ಕಾಂಗ್ರೆಸ್ ವಿಚಾರದಲ್ಲಿ ಸಿಟ್ಟಾಗಿದ್ದಾರೆ ಎಂದು ರಾಹುಲ್ ಗಾಂಧಿ ಒಪ್ಪಬೇಕಾಗುತ್ತದೆ. ಕಾಂಗ್ರೆಸ್ ವಿರುದ್ಧ ಮತ ಚಲಾಯಿಸುವ ಮತದಾರರು ಮೂರ್ಖರಲ್ಲ. ಸೋಲು ಭೀತಿ ಎದುರಿಸುವ ನಾಯಕ ತನ್ನ ಘನತೆಯನ್ನು ಮರೆಯಬಾರದು. ಕಾಂಗ್ರೆಸ್ ವಿರುದ್ಧ ಮತ ಚಲಾಯಿಸವವರು ಯೋಗ್ಯ ಕಾರಣವನ್ನೇ ಹೊಂದಿರುತ್ತಾರೆ. ಕ್ರೋಧಿತ ಮತದಾರರು ರಾಹುಲ್ ಗಾಂಧಿ ಬಳಸಿದ ನಾಲ್ಕು ಪದಗಳ ಅರ್ಥ ನೀಡುವ ವ್ಯಕ್ತಿಗಳಲ್ಲ.

*******